# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 07.11.2020 ರ
## ಸಭಾ ನಡುವಳಿ

ದಿನಾಂಕ: 07.11.2020 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ಇಲ್ಲಿ ಬಿಬಿಎಂಪಿ ಸಮುದಾಯ ಭವನ ಕಟ್ಟಡದಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್ ಶ್ರೀಧರ್ | ನೋಡಲ್ ಅಧಿಕಾರಿ, ವಾರ್ಡ್ ನಂ. 06(ಥಣಿಸಂದ್ರ) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀಮತಿ ಡಾ॥ ಕೇಶವಪಾಣಿ | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 3 | ಶ್ರೀ ಕಿರಣ್.ಬಿ | ಸಹಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಂಪಿ |
| 4 | ಶ್ರೀ ಕೆ.ಆರ್ ಗಂಗಾಧರಯ್ಯ | ಕಿರಿಯ ಅಭಿಯಂತರರು, ಬೆಸ್ಕಾಂ |
| 5 | ಶ್ರೀ ವಿ. ಪ್ರೇಮ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 |
| 6 | ಶ್ರೀ ಜಿತೇಂದ್ರ ರಾವ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 7 | ಶ್ರೀ ಮಂಜುನಾಥ್. ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು, |
| 8 | ಶ್ರೀ ವೆಂಕಟೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |

ಶ್ರೀ ಶ್ರೀಧರ್ ಬಿ.ಎಸ್ ನೋಡಲ್ ಅಧಿಕಾರಿ, ವಾರ್ಡ್ ನಂ. 06 ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು, ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಈ ಹಿಂದೆ ದಿನಾಂಕ: 17.10.2020 ರಂದು ನಡೆದ ಸಭೆಯ ನಡವಳಿಯನ್ನು ವೀಕ್ಷಿಸಿ ಕೈಗೊಂಡ ಕ್ರಮದ ಬಗ್ಗೆ ಕಾರ್ಯದರ್ಶಿಯವರಿಂದ ಮಾಹಿತಿಯನ್ನು ಪಡೆದುಕೊಂಡರು ತದನಂತರ ಕಾರ್ಯದರ್ಶಿಯವರು ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಜಾಗೃತ ಕ್ರಮಗಳ ಬಗ್ಗೆ.** ಡಾ॥ ಕೇಶವಪಾಣಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಟೆಸ್ಟಿಂಗ್ ಮಾಡಲು ನಿರ್ದೇಶನ ನೀಡಿದ್ದು, ಅದರಂತೆ ಬಿಬಿಎಂಪಿ ರೆವಿನ್ಯೂ, ಇಂಜಿನಿಯರಿಂಗ್, ಆರೋಗ್ಯ ಶಾಖೆ ರವರ ಸಹಕಾರದಿಂದ ಸಾರ್ವಜನಿಕವಾಗಿ ಪರೀಕ್ಷೇ ಮಾಡಲಾಗುತ್ತಿದ್ದು, ಕೊರೊನಾ ಸೊಂಕು ಕಳೆದ 15 ದಿನಗಳಿಂದ ಕಡಿಮೆಯಾಗುತ್ತಿದ್ದು, ಬಡಾವಣೆ ನಿವಾಸಿಗಳ ಸಂಘದವರು ತಮ್ಮ ತಮ್ಮ ಬಡಾವಣೆಗಳಲ್ಲಿ ಸಾರ್ವಜನಿಕರಿಗೆ ಕೋವಿಡ್-19ರ ಪರೀಕ್ಷೆ ಮಾಡಲು ಸಹಕಾರ ಕೋರಿದರು.

Scanned with CamScanner

2. **ದಾಸಪ್ಪ, ಸಂಯುಕ್ತ ಗೆಳೆಯರ ಬಳಗ ಹೆಗಡೆನಗರ:** ರವರು ಮಾತನಾಡಿ

1. ವಾರ್ಡ್ ನಂ. 06ರ ವ್ಯಾಪ್ತಿಯಲ್ಲಿ ಬರುವ ಹೆಗಡೆನಗರ ವೃತ್ತದ ಹತ್ತಿರ ಯಾವುದೇ ಸಾರ್ವಜನಿಕ ಶೌಚಾಲಯ ಇಲ್ಲದೇ ಇರುವುದರಿಂದ ಸಾರ್ವಜನಿಕರಿಗೆ, ಬಸ್ ಡ್ರೈವರ್, ಕಂಡಕ್ಟರ್‌ಗಳಿಗೆ ಹಾಗೂ ಮಹಿಳೆಯರಿಗೆ ತುಂಬ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು ಕಲ್ಯಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯು ಅವಶ್ಯಕವಾಗಿದ್ದು, ಕಲ್ಯಾಣ ಶಾಖೆಯಿಂದ ವಾರ್ಡ್ ಸಮಿತಿಗೆ ಯಾರು ಅಧಿಕಾರಿಯು ಹಾಜರಾಗದೇ ಇರುವುದರಿಂದ ಮುಂದಿನ ಸಭೆಗೆ ಕಡ್ಡಾಯವಾಗಿ ಕಲ್ಯಾಣ ಶಾಖೆಯಿಂದ ಸಿಬ್ಬಂಧಿಗಳು ಸಭೆಯಲ್ಲಿ ಹಾಜರಿರುವಂತೆ ಕ್ರಮ ವಹಿಸಲು ಕೋರಿದರು.
2. ಹೆಗಡೆನಗರ ಮುಖ್ಯರಸ್ತೆಯಲ್ಲಿ ನೀರಿನ ಕೊಳವೆಸಾಲನ್ನು ಅಳವಡಿಸಿರುವುದಿಲ್ಲವೆಂದು ತಿಳಿಸಿದರು ಸದರಿ ವಿಷಯದ ಬಗ್ಗೆ ನೊಡಲ್ ಅಧಿಕಾರಿಗಳೂ ಪರಿಶೀಲಿಸಿ ಕ್ರಮ ವಹಿಸಲು ಸೂಚಿಸಿದರು.
3. ಬಿ.ಡಬ್ಲೂ.ಎಸ್.ಎಸ್.ಬಿ ಛೇಂಬರ್‌ಗಳೂ ತುಂಬ ಹರಿಯುತ್ತಿರುವುದರಿಂದ ಇದರ ಬಗ್ಗೆ ಕ್ರಮ ವಹಿಸಲು ಕೋರಿದರು.
4. ಹೆಗಡೆನಗರದಲ್ಲಿ ಯೋಜನಾ ವಿಭಾಗದ ವತಿಯಿಂದ ಚರಂಡಿಗಳ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು ಗುತ್ತಿಗೆದಾರರು ಕಾಮಗಾರಿಯನ್ನು ನಿಧಾನಗತಿಯಲ್ಲಿ ನಿರ್ವಹಿಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು ಈ ಬಗ್ಗೆ ನೊಡೆಲ್ ಅದಿಕಾರಿಗಳು ಯೋಜನಾ ವಿಭಾಗದ ಸ.ಕಾ.ಅ ರವರಿಗೆ ಸೂಚಿಸಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಸೂಚಿಸಿದರು.
5. ಥಣೀಸಂದ್ರ ಮುಖ್ಯರಸ್ತೆ ತುಂಬ ಹಳಾಗಿದ್ದು, ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯುಂಟಾಗಿರುವುದಾಗಿ ತಿಳಿಸಿ ಕೂಡಲೇ ದುರಸ್ತಿ ಮಾಡಲು ಸಂಬಂಧಪಟ್ಟ ಅಭಿಯಂತರರಿಗೆ ತಿಳಸಬೇಕಗಿ ಕೋರಿದರು.

3. **ಹೆಗಡೆಗರ ನಿವಾಸಿ :** ರವರು ಮಾತನಾಡಿ ಹೆಗಡೆನಗರ ಬಸ್ ನಿಲ್ದಾಣದ ಹತ್ತಿರ ಸಮಪರ್ಕವಾಗಿ ಕಸವನ್ನು ವಿಲೇವಾರಿ ಮಾಡುತ್ತಿರುವುದಿಲ್ಲವೆಂದು ತಿಳಿಸಿದರು ಹಾಗೂ ಎಲ್ಲಾ ಬ್ಲಾಕ್ ಸ್ಪಾಟ್‌ಗಳಿಗೆ ಬ್ಲೀಚಿಂಗ್ ಪೌಡರ್‌ಗಳನ್ನು ಅಳವಡಿಸುವಂತೆ ಕೋರಿದರು.

4. **ಶ್ರೀ ರಾಜಗೋಪಾಲ್ ಭಾಗ್ಯಶ್ರೀ ಬಡಾವಣೆ** ರವರು ಮಾತನಾಡಿ ಭಾಗ್ಯಶ್ರೀ ಬಡಾವಣೆಯ ರಸ್ತೆಗಳ ಪಕ್ಕದಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು ಸದರಿ ಗಿಡಗಂಟಿಗಳನ್ನು ತೆಗೆದು ಸ್ವಚ್ಚಗೊಳಿಸಲು ಕೋರಿದರು ಹಾಗೂ ರಸ್ತೆ ಪಕ್ಕದ ಮರಗಳ ಕೊಂಬೆಗಳನ್ನು ಕತ್ತಿರಿಸಲು ಕೋರಿದರು.

5. **ಶ್ರೀ ರಜೇಂದ್ರ, ಎಂ.ಎಸ್ ರಾಮಯ್ಯ ನಾರ್ತ್ ಸಿಟಿ** ರವರು ಮಾತನಾಡಿ

1. ಎಂ.ಎಸ್ ರಾಮಯ್ಯ ಬಡಾವಣೆಯ ಕೆಲವು ಸ್ಥಳಗಳಲ್ಲಿ ಹೊಸದಾಗಿ ಅಡಿಗಾಲುವೆಗಳ ಅವಶ್ಯಕವಾಗಿದ್ದು, ಅಡಿಗಾಲುವೆಗಳನ್ನು ನಿರ್ಮಿಸಿಕೊಡುವಂತೆ ಕೋರಿದರು.
2. ಬಡಾವಣೆಯಲ್ಲಿ ಬಾಕಿ ಇರುವ ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚುವಂತೆ ಕೋರಿದರು.
3. 1ನೇ ಅಡ್ಡರಸ್ತೆಯಲ್ಲಿ ಮಳೆ ನೀರಿನ ಕೋಯ್ಲು ನಿರ್ಮಾಣ ಮಾಡಲು ಕೋರಿದರು.

6. **ಶ್ರೀ ಶ್ರೀನಿವಾಸ್‌ರಾವ್** ರವರು ಮಾತನಾಡಿ

1. ವಾರ್ಡ್ ಸಮಿತಿ ಸಭೆ ಸಮಯಕ್ಕೆ ಸರಿಯಾಗಿ 11.00 ಗಂಟೆಗೆ ಪ್ರಾರಂಬಿಸಲು ಕೋರಿದರು ಇದಕ್ಕೆ ನೊಡೆಲ್ ಅಧಿಕಾರಿಗಳು ಮಾತನಾಡಿ ಎಲ್ಲಾ ಅಧಿಕಾರಿಗಳು ಹಾಗೂ ಬಡಾವಣೆ ನಿವಾಸಿಗಳ ಸಂಘದ ಪದಾದಿಕಾರಿಗಳು ಪ್ರತಿ ವಾರ್ಡ್ ಸಭೆಗೆ ಸಮಯಕ್ಕೆ ಸರಿಯಾಗಿ ತಪ್ಪದೇ ಹಾಜರಾಗಲು ಸೂಚಿಸಿದರು.
2. ಮನೆ ಮನೆಗೆ ಒಳಚರಂಡಿ ಕೊಳವೆಸಾಲುಗಳ ಸಂಪರ್ಕವನ್ನು ತುರ್ತಾಗಿ ನೀಡುವಂತೆ ಕೋರಿದರು ಇದರ ಬಗ್ಗೆ ನೊಡೆಲ್ ಅಧಿಕಾರಿಗಳೂ ಕೂಡಲೇ ಕ್ರಮ ವಹಿಸುವಂತೆ ಬಿ.ಡಬ್ಲೂಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

Scanned with CamScanner

7. ಶ್ರೀ ವೆಂಕಟೇಶ್ ಹೆಗಡೆನಗರ ರವರು ಮಾತನಾಡಿ ಹೆಗಡೆನಗರ ವೃತ್ತದ ಹತ್ತಿರ ರಸ್ತೆಯು ಸಿಂಕ್ ಆಗಿದ್ದು ಇದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬ ತೊಂದರೆಯುಂಟಾಗಿರುತ್ತದೆ ಇದರಿಂದ ಸೂಕ್ತ ಕ್ರಮ ವಹಿಸುವಂಥೆ ಕೋರಿದರು ಇದರ ಬಗ್ಗೆ ನೊಡೆಲ್ ಅಧಿಕಾರಿಗಳು ಸಂಬಂಧಪಟ್ಟ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದ ಅಭಿಯಂತರರಿಗೆ ಪರಿಶೀಲಿಸಿ ಕ್ರಮ ವಹಿಸುವಂತೆ

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾ ದೂರು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

7/11/2020
ನೋಡೆಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06. (ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.

Scanned with CamScanner